ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಹೆಚ್.ಬಿ.ಎಸ್. ವಕೀಲರಿಂದಃ-

ಸಾಕ್ಷಿಗೆ ನಿಮ್ಮ ತಾತನವರು ಮಾಡಿರುವ ಪಂಚಾಯಿತಿ ಪಾರಿಕತ್ ಗಳು ಯಾರ ಯಾರ ಬಳಿ ಇರುತ್ತದೆ ಎಂದರೆ ಸಾಕ್ಷಿ ನಮ್ಮ ತಾತನವರ ಒಂದೇ ಪಾರಿಕತ್ ಮಾಡಿರುತ್ತಾರೆ ಅದು ನಮ್ಮ ಚಿಕ್ಕಪ್ಪನವರ ಇತ್ತು ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ನಿಪಿ-39 ರ ಮುಖ ಪುಟದಲ್ಲಿ 5 ನೇ ಕೆಂಪಣ್ಣನವರ ಪಾರಿಕತ್ ಎಂದು ಬರೆಯಲಾಗಿರುತ್ತದೆ ಎಂದರೆ ಸರಿ. ನಿಮ್ಮ ವಾದ ಪತ್ರದಲ್ಲಿ ನಮ್ಮ ತಾತನವರು ಒಂದೇ ಪಾರಿಕತ್ ಬರೆಸಲಾಗಿರುತ್ತದೆ ಅದು ಕೆಂಪಣ್ಣನವರ ಬಳಿ ಇರುತ್ತದೆ ಎಂದು ಹೇಳಿ ಬರೆಸಿರುತ್ತೇನೆ. ನಿಪಿ-39 ರ ಪಾರಿಕತ್ ಗೆ ನಿಮ್ಮ ತಂದೆ ಮತ್ತು ಅವರ ಸಹೋದರರು ಎಲ್ಲರೂ ಸಹಿ ಮಾಡಿರುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ 2024-25 ನೇ ಸಾಲಿನ ಕಂದಾಯವನ್ನು ಪಾವತಿ ಮಾಡಿರುತ್ತೇನೆ. ಸದರಿ ಕಂದಾಯ ಪಾವತಿ ರಶೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಾಕ್ಷಿದಾರರು ಸಮಯ ಕೋರಿದ ಕಾರಣ ಮುಂದೂಡಾಲಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.